"ಹೇಳಮ್ಮ ಏನು ವಿಶೇಷ" ಎಂದೆ ನಾನು.

"ಬೆಳಗ್ಗೆ ನಿಮ್ಮ ವಿಡಿಯೊ ನೋಡಿ ಖುಷಿಯಾಗಿತ್ತು. ಅದಕ್ಕೇ ನೈಸ್ ಅಂತ ಬರೆದೆ. ಮುಂದಿನ ವಾರ ಒಮ್ಮೆ ಬೆಂಗಳೂರಿಗೆ ಹೋಗಿ ಬರೋಣ ಅಂತಲೂ ನಿಮ್ಮಪ್ಪನವರಲ್ಲಿ ಹೇಳಿದ್ದೆ. ಆದರೆ, ಮಧ್ಯಾಹ್ನ ಆಗಬಾರದ್ದು ಆಗಿಹೋಯಿತು. ಇಲ್ಲಿಯ ಮುನಿಸಿಪಾಲ್ಟಿಯವರು ಬಂದು ಇಲೆಕ್ಟ್ರಿಕ್ ಗರಗಸ ಬಳಸಿ ಅರ್ಧಗಂಟೆಯಲ್ಲಿ ಮನೆ ಎದುರಿನ ಬೂರುಗದ ಮರ ಕಡಿದು ಹಾಕಿ ಹೋದ್ರು. ನಿಮ್ಮಪ್ಪ ಮತ್ತವರ ಗೆಳೆಯರೆಲ್ಲ ಮರ ಉಳಿಸಲಿಕ್ಕೆ ಏನೇನೋ ಪ್ರಯತ್ನ ಮಾಡಿದರು. ಯಾರ್‍ಯಾರದ್ದೋ ಕಾಲು ಹಿಡಿದರು. ಪ್ರಯೋಜನವಾಗಲಿಲ್ಲ. ರಸ್ತೆ ಅಗಲ ಮಾಡುತ್ತಾರಂತೆ. ನೋಡಿ ಕಣ್ಣಲ್ಲಿ ನೀರು ಬಂತು. ಹಕ್ಕಿಗಳ ಗೂಡುಗಳೆಲ್ಲ ನೆಲಸಮವಾಗಿವೆ. ಸಂಜೆಯವರೆಗೂ ಅವುಗಳ ಆಕ್ರಂದನ ಮುಂದುವರೆದಿತ್ತು. ನಮ್ಮ ಮನೆ ಆಸುಪಾಸಿನಲ್ಲಿ ಇದ್ದದ್ದೇ ಒಂದು ಮರ. ಅದೂ ಬಲಿಯಾಗಿ ಹೋಯಿತು. ಇನ್ನೆಲ್ಲಿ ಬೂರುಗದ ಹಕ್ಕಿ ಅಂತ ದುಃಖವಾಗ್ತಾ ಇದೆ. ನಿನ್ನಪ್ಪ ಕೂಡ ಮಂಕಾಗಿ ಊಟ ಕೂಡ ಮಾಡದೆ ಒಂಬತ್ತಕ್ಕೇ ಹೋಗಿ ಮಲಗಿಕೊಂಡಿದ್ದಾರೆ" ಅಂದಳು ಅಮ್ಮ.

ಅಷ್ಟು ಹೊತ್ತೂ ಮೊಬೈಲಿನಲ್ಲಿ ಕಮೆಂಟುಗಳನ್ನು ಓದುತ್ತ ರಿಪ್ಲೈ ಮಾಡುತ್ತ ಸಂಭ್ರಮಿಸುತ್ತಿದ್ದ ರಮಾ ಒಮ್ಮೆಲೆ ಮುಖ ಕಪ್ಪಿಟ್ಟುಕೊಂಡು ಬಂದು ಫೋನ್ ನನ್ನ ಕೈಗೆ ಕೊಟ್ಟು, "ಮಾವ ಏನ್ ಕಮೆಂಟ್ ಹಾಕಿದ್ದಾರೆ ನೋಡಿ, ಹಕ್ಕಿಗಳು ನಮ್ಮ ಹೆಗಲ ಮೇಲೆಯೇ ಪಿಚಿಕೆ ಹಾಕುವ ದಿನಗಳು ದೂರವಿಲ್ಲ ಅಂತ ಬರೆದಿದ್ದಾರೆ. ಏನಾಗಿದೆ ಅವರಿಗೆ?..." ಅನ್ನುತ್ತ ಕಣ್ಣಲ್ಲಿ ನೀರು ಸುರಿಸಿಕೊಳ್ಳುತ್ತ ಬಿರಬಿರನೆ ಹೋಗಿ ಮಲಗಿಕೊಂಡಳು.

ಮರುದಿನ ಬೆಳಗ್ಗೆಯೂ ಆಕೆಯ ಕೋಪ ಇಳಿದಿರಲಿಲ್ಲ. ನನಗೂ ರಾತ್ರಿಯಿಡೀ ಮರ ಮತ್ತು ಹಕ್ಕಿ ಕಣ್ಣೆದುರು ಬಂದು ನಿದ್ದೆಯಿಲ್ಲವಾಗಿತ್ತು. ಒಲ್ಲದ ಮನಸ್ಸಿನೊಂದಿಗೆ ಆಫೀಸಿಗೆ ಹೊರಟೆ. ಬಾನೆಟ್ ಮೇಲೆ ದೃಷ್ಟಿ ಹೋಯಿತು. ಹಕ್ಕಿ ಕಾಣಿಸಲಿಲ್ಲ. ಅಪ್ಪನ ಕಮೆಂಟು ಮನಸ್ಸನ್ನು ಕೆದಕುತ್ತಲೇ ಇತ್ತು. ಕಾರನ್ನು ರಸ್ತೆಗಿಳಿಸಿ ಸ್ವಲ್ಪ ಸ್ಲೋ ಆಗಿ ಡ್ರೈವ್ ಮಾಡುತ್ತಾ ನಾಲ್ಕೂ ಕಡೆ ನೋಡಿದೆ. ಹಕ್ಕಿ ಎಲ್ಲೂ ಕಾಣಲಿಲ್ಲ. ಹಿಂದಿನ ಕಾರಿನವ ಊರಿಗೆ ಬೆಂಕಿಬಿದ್ದವನ ಹಾಗೆ ಹಾರ್ನ್ ಹಾಕಲಾರಂಭಿಸಿದ. ಕಣ್ಣು ಆಚೀಚೆ ಹುಡುಕುತ್ತಿದ್ದರೂ ಹಕ್ಕಿ ಕಾಣಸಿಗಲೇ ಇಲ್ಲ. ಅಪ್ಪನ ಕಮೆಂಟು, ಅಮ್ಮನ ಬೂರುಗದ ಮರ ಮತ್ತು ಅಲ್ಲಿಯ ಹಕ್ಕಿಗಳು ಮತ್ತೆ ನೆನಪಾದವು.

ನಮ್ಮ ಹಕ್ಕಿ ನಮ್ಮಮ್ಮನ ಬೂರುಗದ ಮರದಲ್ಲಿ ವಾಸವಿದ್ದ ತನ್ನ ಹೆತ್ತವರನ್ನು ಸಾಂತ್ವನಗೊಳಿಸಲು ಅಲ್ಲಿಗೆ ಹಾರಿಹೋಗಿದೆಯೇ? ಅನ್ನುವ ಪ್ರಶ್ನೆ ಎಲ್ಲಿಂದಲೋ ಹಾರಿ ಬಂದು ಮನಸ್ಸಿನಲ್ಲಿ ಬಿರುಗಾಳಿ ಎಬ್ಬಿಸಿತು.

ಯಾರಲ್ಲಿ ಕೇಳುವುದು!

**ಗೋಪೀನಾಥ ರಾವ್**

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿ. ತಂದೆ ಪ್ರಸಿದ್ಧ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ತಾಯಿ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಅವರ ಪ್ರಕಟಿತ ಕಥಾಸಂಕಲನಗಳು.